ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಆ) ಬೇಸಿಗೆಯು ಪ್ರಾರಂಭವಾಗಿದ್ದು, ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯು ದಿನೇ ದಿನೇ ಹೆಚ್ಚುತ್ತಿದೆ. ವಿದ್ಯುತ್ ಬೇಡಿಕೆಯನ್ನು ವಿದ್ಯುತ್ ಲಭ್ಯತೆಯೊಂದಿಗೆ ಸರಿದೂಗಿಸುವುದು ಬಹಳ ಅಗತ್ಯವಾಗಿದೆ. ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ 6 ಗಂಟೆಗಳ ಅವಧಿಯ ನಿಯಮಿತ ಲೋಡ್‌ಶೆಡ್ಡಿಂಗ್‌ನ್ನು ಜಾರಿಗೊಳಿಸಲಾಗಿದೆ. ಅಲ್ಲದೇ, ಸಂಜೆಯ ಪೀಕಲೋಡ್ ಸಮಯದಲ್ಲಿ ಅಂದರೆ ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಂಗಲ್ ಫೇಸ್‌ನಲ್ಲಿ ಮಾತ್ರ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಕ್ರಮಗಳು ಅನಿವಾರ್ಯವಾಗಿದೆ. ಈ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ರೈತಾಪಿ ವರ್ಗವು ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಆ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಗರಿಷ್ಠಗೊಳಿಸಲಾಗಿದೆ. ಅಲ್ಲದೇ, ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ವಿದ್ಯುತ್ ಪಾಲನ್ನು ಸಂಪೂರ್ಣವಾಗಿ ಪಡೆಯಲಾಗುತ್ತಿದೆ. ನೆರೆರಾಜ್ಯವಾದ ಮಹಾರಾಷ್ಟ್ರದಿಂದ ವಿದ್ಯುತ್ ನೆರವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವ ಕಾರ್ಯ

279 (357) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಆ) ರಾಜ್ಯದಲ್ಲಿರುವ ಅನೇಕ ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಕೆರೆಗಳಲ್ಲಿ ಸಾಕಷ್ಟು ನೀರು ಶೇಖರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನಲ್ಲಿ ಯಾವ ಯಾವ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ ಕೈಗೊಳ್ಳಲಾಗಿದೆ ವಿವರ ನೀಡುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಆ) ಹೌದು ಬಂದಿದೆ.

ಆ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಕೆರೆಗಳಲ್ಲಿ ಹೂಳೆತ್ತುವ ಯಾವ ಯಾವ ಕಾರ್ಯಕ್ರಮವನ್ನು ಕೈಗೊಂಡಿರುವುದಿಲ್ಲ. ರೈತರ ಪಾಲ್ಗೊಳ್ಳುವಿಕೆಯಿಂದ ಹೂಳೆತ್ತುವ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತಿದೆ.

ರಾಜ್ಯದಲ್ಲಿ ಮತದಾರರಿಗೆ ಗುರುತಿನ ಚೀಟಿ

280 (528) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರಿಗೆ ಗುರುತಿನ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗಿದೆಯೇ;

ಆ) ಈ ದಿಕ್ಕಿನಲ್ಲಿ ರಾಜ್ಯದಲ್ಲಿ ಎಷ್ಟು ಮತದಾರರಿಗೆ ಗುರುತಿನ ಚೀಟಿ ನೀಡಬೇಕಾಗಿದೆ?

ಇ) ಇದುವರೆವಿಗೂ ಎಷ್ಟು ಜನರಿಗೆ ವಿತರಿಸಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಈ) ಗುರುತಿನದ ಚೀಟಿ ನೀಡುವಿಕೆ ಕಾರ್ಯ ಯಾವ ದಿನಾಂಕದೊಳಗೆ ಮುಗಿಯಬೇಕಾಗಿತ್ತು; ನಿಗದಿತ ಸಮಯದೊಳಗೆ ಗುರುತಿನ ಚೀಟಿ ನೀಡುವ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ಕಾರಣವೇನು?

ಶ್ರೀ ಜೆ. ಹೆಚ್ ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಈ ದಿಕ್ಕಿನಲ್ಲಿ ರಾಜ್ಯದಲ್ಲಿ 3, 12, 71, 18 ಮತದಾರರಿಗೆ ಭಾವ ಚಿತ್ರವಿರುವ ಗುರುತಿನ ಚೀಟಿಯನ್ನು ನೀಡಬೇಕಾಗಿದೆ.

ಇ) ದಿನಾಂಕ 15- 12- 97ರ ವರೆವಿಗೂ 2, 39, 11, 833 ಮತದಾರರಿಗೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ನೀಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಈ) ಚುನಾವಣಾ ಆಯೋಗದಿಂದ ಈ ಕಾರ್ಯಕ್ರಮವನ್ನು ಪೂರೈಸಲು ಸಮಯವನ್ನು ನಿರ್ಧರಿಸಿರುವುದಿಲ್ಲ. ಆದಾಗ್ಯೂ ಕಾರ್ಯಕ್ರಮವನ್ನು ಜಾಗೃತೆಯಾಗಿ ಪೂರೈಸಲು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅನುಬಂಧ

ANNEXURE

ಮತದಾರರಿಗೆ ಭಾವ ಚಿತ್ರವಿರುವ ಗುರುತಿನ ಚೀಟಿ ನೀಡಿದ ಬಗ್ಗೆ ಜಿಲ್ಲಾವಾರು ವಿವರಗಳು

Districtwise details of Photo Identify Cards issued to electors

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		ಗುರುತಿನ ಚೀಟಿಗಳ
Sl. No.	Name of the District		Identity Card Nos. (As on)
1)	ಬೀದರ್	Bidar	4,64,624
2)	ಗುಲ್ಬರ್ಗ	Gulbarga	11,68,323
3)	ರಾಯಚೂರು	Raichur	10,31,798
4)	ಬಳ್ಳಾರಿ	Bellary	8,65,008
5)	ಚಿತ್ರದುರ್ಗ	Chitradurga	11,91,986
6)	ತುಮಕೂರು	Tumkur	13,97,148
7)	ಬೆಂಗಳೂರು ಮಹಾನಗರ ಪಾಲಿಕೆ	Bangalore City Corporation	18,45,654
8)	ಬೆಂಗಳೂರು	Bangalore	10,45,024
9)	ಬೆಂಗಳೂರು ಗ್ರಾಮಾಂತರ	Bangalore Rural	10,71,211
10)	ಮಂಡ್ಯ	Mandya	9,95,142
11)	ಮೈಸೂರು	Mysore	9,01,388
12)	ಕೊಡಗು	Kodagu	2,34,415
13)	ಹಾಸನ	Hassan	7,68,935
14)	ದಕ್ಷಿಣ ಕನ್ನಡ	Dakshina Kannada	14,94,756
15)	ಚಿಕ್ಕಮಗಳೂರು	Chickamagalur	6,07,500
16)	ಕೋಲಾರ	Kolar	12,80,689
17)	ಶಿವಮೊಗ್ಗ	Shimoga	11,00,004
18)	ಉತ್ತರ ಕನ್ನಡ	Uttara Kannada	6,53,278
19)	ಧಾರವಾಡ	Dharwad	15,36,077
20)	ಬೆಳಗಾಂ	Belgaum	18,00,491
21)	ಬಿಜಾಪುರ	Bijapur	14,58,382
	ಒಟ್ಟು	Total	2,39,11,833